ಜನಸಂಖ್ಯೆಯಿರುವ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸಿ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ವಿವರ :

ಆಯಾ ತಾಲ್ಲೂಕಿಗೆ ನಿಗದಿಪಡಿಸಲಾದ ಅನುದಾನವನ್ನು ಆಯಾ ತಾಲ್ಲೂಕಿನಲ್ಲಿ ಆಯ್ಕೆಯಾದ ಒಟ್ಟಾರೆ ಗ್ರಾಮಗಳ ಜನಸಂಖ್ಯೆ ಆಧಾರದ ಮೇಲೆ ತಲಾನುದಾನವನ್ನು ನಿಗದಿಪಡಿಸಿ ಆಯಾ ಗ್ರಾಮಗಳ ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ನಿಗದಿಪಡಿಸಲಾಗಿದೆ.

ಗ್ರಾಮಗಳ ನಿಗದಿತ ಅನುದಾನದಲ್ಲಿ ಸುಮಾರು ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಶೇ.60, ಸಮುದಾಯ ಭವನಕ್ಕೆ (ಒಂದೇ ಕಟ್ಟಡ) ಶೇ.15, ಅಂಗನವಾಡಿ ಕಟ್ಟಡಕ್ಕೆ ಶೇ.10, ತ್ಯಾಜ್ಯ ವಸ್ತು ವಿಲೇವಾರಿ (ಭೂ ಖರೀದಿ)ಗೆ ಶೇ.7, ತರಬೇತಿ ಶೇ.6, ವಿದ್ಯುಚ್ಛಕ್ತಿ(ಹೊಸ ಬಡಾವಣೆಗೆ–ವಿದ್ಯುಚ್ಛಕ್ತಿ ಕಂಬ ಮತ್ತು ಸಂಪರ್ಕ)ಗೆ ಶೇ.1 ಮತ್ತು IEC ಚಟುವಟಿಕೆಗೆ ಶೇ.1 ರಂತೆ ಅನುದಾನವನ್ನು ನಿಗದಿಪಡಿಸಿ. ಗ್ರಾಮಗಳ ಬೇಡಿಕೆಯಾನುಸಾರ ಗ್ರಾಮಾಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಪಂಚಾಯತ್‌ರಾಜ್ ಸಂಸ್ಥೆಗಳ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

998 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ಪಟ್ಟಣದಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಮತ್ತು ಗುರುತಿಸಿದ ನಂತರ ಅವುಗಳ ಅಭಿವೃದ್ಧಿಗಾಗಿ ಈವರೆಗೂ ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

ಶ್ರೀ ವಿ. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹೌದು.

ಆ) ಹುಣಸೂರು ಪಟ್ಟಣದಲ್ಲಿ 17 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು ಅವುಗಳ ಪೈಕಿ 16 ಕೊಳಚೆ ಪ್ರದೇಶಗಳನ್ನು ಮಂಡಳಿ ಕಾಯಿದೆಯಡಿಯಲ್ಲಿ ಘೋಷಿಸಲಾಗಿರುತ್ತದೆ. ಉಳಿದ ಒಂದು ಕೊಳಚೆ

ಪ್ರದೇಶವನ್ನು ಘೋಷಿಸಲು, ಅಗತ್ಯ ದಾಖಲೆಗಳನ್ನು ಪಡೆದು ಕ್ರಮ ಕೈಗೊಳ್ಳಲಾಗುವುದು.

ಘೋಷಿತ 5 ಕೊಳಚೆ ಪ್ರದೇಶಗಳಲ್ಲಿ, ಸಮಗ್ರ ವಸತಿ ಹಾಗೂ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ, ಮೂಲಭೂತ ಸೌಕರ್ಯಗಳೊಂದಿಗೆ, ವಸತಿ ನಿರ್ಮಾಣ ಕೈಗೊಳ್ಳಲು ಯೋಜನಾ ವರದಿಯನ್ನು ತಯಾರಿಸಿ, ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ.

1096 ಶ್ರೀ ಗೋಪಾಲ ಭಂಡಾರಿ. ಹೆಚ್ (ಕಾರ್ಕಳ) : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳಚೆ ನಿರ್ಮೂಲನ ಮಂಡಳಿಯಿಂದ ಉಡುಪಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಕೊಳಚೆ ಪ್ರದೇಶಗಳು ಯಾವುವು (ಪುರಸಭೆವಾರು ಮಾಹಿತಿ ಒದಗಿಸುವುದು);

ಆ) ಕೊಳಚೆ ನಿರ್ಮೂಲನ ಮಂಡಳಿಯಿಂದ ಕಾರ್ಕಳ ಪುರಸಭೆ ವ್ಯಾಪ್ತಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಯಾವುವು; ಅವುಗಳಿಗೆ ವ್ಯಯಿಸಿದ ಮೊತ್ತ ಎಷ್ಟು;

ಇ) ಇತ್ತೀಚಿನ ವರ್ಷಗಳಲ್ಲಿ ಕಾರ್ಕಳ ಪುರಸಭೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ಆಗಬೇಕಾಗಿದ್ದಾಗಿಯೂ ಸಹ ಕೊಳಚೆ ನಿರ್ಮೂಲನ ಮಂಡಳಿಯಿಂದ ಕ್ರಮ ತೆಗೆದುಕೊಳ್ಳದೆ ಇರಲು ಕಾರಣವೇನು?

ಶ್ರೀ ವಿ. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಉಡುಪಿ ಜಿಲ್ಲೆಯ ಉಡುಪಿ ಹಾಗೂ ಕಾರ್ಕಳ ಪಟ್ಟಣಗಳಲ್ಲಿ 17 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ.

ಉಡುಪಿ	ಕಾರ್ಕಳ
ದೊಡ್ಡನಗುಡ್ಡೆ	ಬೊಬ್ಬರ ಕೊರವರ ಕಾಲೋನಿ
ಬಲರಾಮನಗರ	ಧನಶಾಲಾ
ಪಾಳೇಕಟ್ಟೆ	ಬಂಡಿಮಠ
ನ್ಯೂ ಕಾಲೋನಿ	ಬಾಂಗ್ಲೆಗುಡ್ಡ
ಹನುಮಂತನಗರ	ಹವಲ್‌ದಾರ್ ಬೆಟ್ಟು
ರಾಜೀವ ನಗರ	ಅಯ್ತ ಕಟ್ಟೆ
ವಿಷ್ಣುಮೂರ್ತಿ ನಗರ	ಬೊಬ್ಬಳಕೊರವರಕೇರಿ
ಇಂದಿರಾ ನಗರ	ದುರ್ಗಾ ನರ್ಸಿಂಗ್ ಹೋಮ್ ಹತ್ತಿರ
	ರಾಣಿಕೇರಿ